## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು

## ವಿರಾಜಪೇಟೆ

***ಸಿ.ಸಿ. ಸಂಖ್ಯೆ : 947/2021***

***ಚಾಸಾ : 9***
***ಪ್ರಾಸಾ : 7***

| | |
|---|---|
| **ಹೆಸರು** | : ಪಿ ಆರ್ ಲವಕುಮಾರ್ |
| **ತಂದೆಯ ಹೆಸರು** | : ರಾಮಕೃಷ್ಣ |
| **ವಯಸ್ಸು** | : 40 ವರ್ಷ |
| **ಉದ್ಯೋಗ** | : ಪೋಲಿಸ್ ಮುಖ್ಯ ಪೇದೆ, ನಾಪೋಕ್ಲು ಪೋಲಿಸ್ ಠಾಣೆ |
| **ವಾಸಸ್ಥಳ** | : ನಾಪೋಕ್ಲು |

**ದಿನಾಂಕ : *05-03-2024* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮಾನ್ಯ ಸ. ಸ. ಅ. ರವರಿಂದ**

ನಾನು 2014 ನೇ ಇಸವಿಯಿಂದ 2021 ನೇ ಇಸವಿಯವರೆಗೆ ಸಿದ್ದಾಪುರ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 16-05-2021 ರಂದು ನಾನು ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಚಾಸಾ16 ರವರ ಆದೇಶದ ಮೇರೆಗೆ ನಾನು, ಚಾಸಾ-8, 10 ಹಾಗೂ ಚಾಸಾ11 ರವರು ಆರೋಪಿಗಳ ಪತ್ತೆ ಹಚ್ಚುವ ಸಲುವಾಗಿ ಬೆಳಿಗ್ಗೆ ಸುಮಾರು 11 ಗಂಟೆಗೆ ಸಿದ್ದಾಪುರದ ಬಾಡಗ ಬಾಣಾಂಗಾಲ ಗ್ರಾಮಕ್ಕೆ ಹೋಗಿದ್ದು ಅಲ್ಲಿನ ಸಾರ್ವಜನಿಕ ಬಸ್ ನಿಲ್ದಾಣದ ಬಳಿ 1 ರಿಂದ 4 ನೇ ಆರೋಪಿಗಳು ಇದ್ದಿರುವುದು ಕಂಡು ಬಂದಿದ್ದು, ಅವರನ್ನು ಹಿಡಿದುಕೊಂಡು ತಂದು ಠಾಣೆಗೆ ಚಾಸಾ16 ರವರ ಮುಂದೆ ಹಾಜರುಪಡಿಸಿರುತ್ತೇವೆ. ನಂತರ ಚಾಸಾ16 ರವರು ಸದರಿ 1 ರಿಂದ 4 ನೇ ಆರೋಪಿಗಳನ್ನು ವಿಚಾರಿಸಿ ಅವರ ಸ್ವಇಚ್ಛ ಹೇಳಿಕೆಯನ್ನು ದಾಖಲಿಸಿಕೊಂಡಿದ್ದು, ಅವರುಗಳು ತಮ್ಮ ಸ್ವಇಚ್ಛಾ ಹೇಳಿಕೆಯಲ್ಲಿ ಕೃತ್ಯ ಸ್ಥಳವನ್ನು ತೋರಿಸಿಕೊಡುವುದಾಗಿ ತಿಳಿಸಿದ್ದು ಆ ಮೇರೆಗೆ ಚಾಸಾ16 ರವರು 1 ರಿಂದ 4 ನೇ ಆರೋಪಿಗಳ ಬೆಂಗಾಲಾಗಿ ಚಾಸಾ8, 11 ಹಾಗೂ 15 ರವರನ್ನು ಕರೆದುಕೊಂಡು 1 ರಿಂದ 4 ನೇ ಆರೋಪಿಗಳೊಂದಿಗೆ ಕೃತ್ಯ ಸ್ಥಳಕ್ಕೆ ಹೋಗಿದ್ದು, ಅಲ್ಲಿಗೆ ಚಾಸಾ16 ರವರು ಪಂಚರಾದ ಚಾಸಾ6 ಹಾಗೂ 7 ರವರನ್ನು ಬರಮಾಡಿಕೊಂಡು ನಂತರ 1

ರಿಂದ 4 ನೇ ಆರೋಪಿಗಳು ತೋರಿಸಿ ಕೊಟ್ಟ ಸ್ಥಳದಲ್ಲಿ ಮಹಜರ ಕ್ರಮ ಜರುಗಿಸಿತ್ತಾರೆ. ಸದರಿ ಮಹಜರನ್ನು ಮಧ್ಯಾಹ್ನ 1.45 ರಿಂದ 2.30 ಗಂಟೆಯವರೆಗೆ ಜರುಗಿಸಲಾಯಿತು. ಆ ಸಮಯದಲ್ಲಿ ಫೋಟೋ ಸಹ ತೆಗೆದಿರುತ್ತೇವೆ. ಸದರಿ ಮಹಜರಿಗೆ ನಾನು ಸಹ ಮಾಡಿರುತ್ತೇನೆ. ಸಾಕ್ಷಿಗೆ ನಿಪಿ7ನ್ನು ತೋರಿಸಲಾಗಿ, ಸಾಕ್ಷಿಯು ಅದು ಚಾಸಾ*16* ರವರು *1* ರಿಂದ *4* ನೇ ಆರೋಪಿಗಳು ತೋರಿಸಿಕೊಟ್ಟ ಕೃತ್ಯ ಸ್ಥಳದಲ್ಲಿ ಮೇಲೆ ಹೇಳಿದಂತೆ ಜರುಗಿಸಿದ ಮಹಜರು ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ7ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ7(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ *10* ರಿಂದ *15* ಫೋಟೋಗಳನ್ನು ತೋರಿಸಲಾಗಿ ಸಾಕ್ಷಿದು ಅದು ಮೇಲೆ ಹೇಳಿದಂತೆ ನಿಪಿ7 ರಂತೆ ಮಹಜರ ಕ್ರಮ ಜರುಗಿಸುವಾಗ ತೆಗೆದ ಫೋಟೋಗಳು ಎಂದು ಗುರುತಿಸುತ್ತಾರೆ. ನಂತರ ನಾವು *1* ಹಾಗೂ *2* ನೇ ಆರೋಪಿಗಳನ್ನು ಠಾಣೆಗೆ ಕರೆ ತಂದಿರುತ್ತೇವೆ. ನಾನು ಈ ಎಲ್ಲಾ ಸಂಗತಿಗಳ ಬಗ್ಗೆ ತನಿಖಾಧಿಕಾರಿಯವರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ರಿಂದ 3 ನೇ ಆರೋಪಿಗಳನ್ನು ನೋಡಿ ಗುರುತಿಸುತ್ತಾರೆ. 4 ನೇ ಆರೋಪಿ ಗೈರು ಹಾಜರಾಗಿದ್ದು, ಅವರ ಪರ ವಕೀಲರು ಹಾಜರಾತಿ ವಿನಾಯಿತಿಯ ಅರ್ಜಿಯನ್ನು ಸಲ್ಲಿಸಿದ್ದು ಸದರಿ 4 ನೇ ಆರೋಪಿಯ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲವೆಂದು ಪರಿಗಣಿಸಲಾಯಿತು.

**ಪಾಟಿ ಸವಾಲು : ಶ್ರೀ. ಎ ಎಂ ಎಲ್ ಆರೋಪಿಗಳ ಪರ ವಕೀಲರಿಂದ :**

ನನಗೆ 1 ರಿಂದ 4 ನೇ ಆರೋಪಿಗಳನ್ನು ಹಿಡಿಯುವ ಪೂರ್ವದಲ್ಲಿ ಅವರ ಪರಿಚಯವಿದ್ದಿರುವುದಿಲ್ಲ. ಬಾತ್ಮಿದಾರರು ನೀಡಿದ ಮಾಹಿತ ಆಧಾರದ ಮೇಲೆ ನಾವು 1 ರಿಂದ 4 ನೇ ಆರೋಪಿಗಳನ್ನು ವಶಕ್ಕೆ ಪಡೆದು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿರುತ್ತೇವೆ. ಸದರಿ ದಿನದಂದು 1 ರಿಂದ 4 ನೇ ಆರೋಪಿಗಳು ಯಾವ ಬಣ್ಣದ ಬಟ್ಟೆ ಧರಿಸಿರುತ್ತಾರೆಂದು ಹೇಳಲು ನನಗೆ ಈಗ ಆಗುವುದಿಲ್ಲ. ಕೃತ್ಯ ನಡೆದ ಸ್ಥಳದ ಮೂರು ದಿಕ್ಕಿಗೆ ಕಾಫೀ ತೋಟವಿದ್ದು, ಒಂದು ದಿಕ್ಕಿಗೆ ತೋಟದ ಸ್ವಲ್ಪ ದೂರದಲ್ಲಿ ರಸ್ತೆ ಇರುತ್ತದೆ. ಯಾವ ದಿಕ್ಕಿನಲ್ಲಿ ರಸ್ತೆ ಇರುತ್ತದೆಂದು ನನಗೆ ಈಗ ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ. ಮಹಜರಿನ ಸಮಯದಲ್ಲಿ ನಮ್ಮ ಠಾಣಾ ಸಿಬ್ಬಂದಿಯಾದ ಚಾಸಾ10 ರವರು ಫೋಟೋ ತೆಗೆದಿರುತ್ತಾರೆ.

ನಾವು 1 ರಿಂದ 4 ನೇ ಆರೋಪಿಗಳನ್ನು ವಶಕ್ಕೆ ಪಡೆದ ಮೇಲೆ ಅವರುಗಳ ಅಂಗ ಶೋಧನೆ ಮಾಡಿರುವುದಿಲ್ಲ. ಸದರಿ ದಿನದಂದು ನಮ್ಮ ಮೇಲಾಧಿಕಾರಿಯಾದ ಚಾಸಾ16 ರವರು ಆರೋಪಿಗಳ ಪತ್ತೆಗೆ ನಮ್ಮನ್ನು ನೇಮಿಸಿರುವುದಿಲ್ಲ, ನಾವು 1 ರಿಂದ 4 ನೇ ಆರೋಪಿಗಳನ್ನು ವಶಕ್ಕೆ ಪಡೆದು ಅವರನ್ನು ಚಾಸಾ16 ರವರ ಮುಂದೆ ಹಾಜರುಪಡಿಸಿರುವುದಿಲ್ಲ ಹಾಗೂ ನಿಪಿ 7 ರಂತೆ ಜರುಗಿಸಿದ್ದಾರೆಂದು ಹೇಳಲಾದ ಮಹಜರಿನ ಸಮಯದಲ್ಲಿ ಅಲ್ಲಿ ಇದ್ದಿರಲಿಲ್ಲ ಬದಲಾಗಿ ಸದರಿ ಮಹಜರಿಗೆ ಠಾಣೆಯಲ್ಲೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಯವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ದಾಖಲಿಸಿದ ನಂತರ ಯಾವುದೇ ಆರೋಪಿಗಳು ಸಿಕ್ಕಿರುವುದಿಲ್ಲ ಎಂಬ ಕಾರಣಕ್ಕಾಗಿ ನಮ್ಮ ಠಾಣಾಧಿಕಾರಿಯವರು ಆರೋಪಿಗಳು ಮುಸ್ಲಿಂ ಜನಾಂಗಕ್ಕೆ ಸೇರಿದವರಾದ್ದರಿಂದ ಅವರನ್ನು ಹಿಡಿದುಕೊಂಡು ಬರುವಂತೆ ತಿಳಿಸಿದ ಮೇರೆಗೆ ನಾವು 1 ರಿಂದ 4 ನೇ ಆರೋಪಿಗಳನ್ನು ಹಿಡಿದುಕೊಂಡು ಬಂದು ಠಾಣೆಗೆ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ನಾವು ಪತ್ತೆಗೆ ಹೋಗುವ ಪೂರ್ವದಲ್ಲಿ ಠಾಣಾಧಿಕಾರಿಯವರು ಆರೋಪಿಗಳಿಗೆ ಸಂಬಂಧಿಸಿದ ಯಾವುದೇ ಭಾವಚಿತ್ರವನ್ನು ನೀಡಿರುವುದಿಲ್ಲ. ಆರೋಪಿಗಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ವಿರಾಜಪೇಟೆ.

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು

## ವಿರಾಜಪೇಟೆ

***ಸಿ.ಸಿ. ಸಂಖ್ಯೆ : 947/2021***

***ಚಾಸಾ : 11***
***ಪ್ರಾಸಾ : 8***

| | |
|---|---|
| **ಹೆಸರು** | : ಮಲ್ಲಪ್ಪ ಮುಶಿಗೇರಿ |
| **ತಂದೆಯ ಹೆಸರು** | : ಧರ್ಮಪ್ಪ |
| **ವಯಸ್ಸು** | : 32 ವರ್ಷ |
| **ಉದ್ಯೋಗ** | : ಪೋಲಿಸ್ ಪೇದೆ, ವಿರಾಜಪೇಟೆ ಗ್ರಾಮಾಂತರ ಪೋಲಿಸ್ ಠಾಣೆ |
| **ವಾಸಸ್ಥಳ** | : ವಿರಾಜಪೇಟೆ |

**ದಿನಾಂಕ : *05-03-2024* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮಾನ್ಯ ಸ. ಸ. ಅ. ರವರಿಂದ**

ನಾನು 2017 ನೇ ಇಸವಿಯಿಂದ 2022 ನೇ ಇಸವಿಯವರೆಗೆ ಸಿದ್ದಾಪುರ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 16-05-2021 ರಂದು ನಾನು ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಚಾಸಾ16 ರವರ ಆದೇಶದ ಮೇರೆಗೆ ನಾನು, ಚಾಸಾ-8, 9 ಹಾಗೂ 10 ರವರು ಆರೋಪಿಗಳ ಪತ್ತೆ ಹಚ್ಚುವ ಸಲುವಾಗಿ ಬೆಳಿಗ್ಗೆ 8 ಗಂಟೆಗೆ ಠಾಣೆಯಿಂದ ಹೊರಟು ಸುಮಾರು 11 ಗಂಟೆಗೆ ಸಿದ್ದಾಪುರದ ಬಾಡಗ ಬಾಣಾಂಗಾಲ ಗ್ರಾಮಕ್ಕೆ ಹೋಗಿದ್ದು ಅಲ್ಲಿನ ಸಾರ್ವಜನಿಕ ಬಸ್ ನಿಲ್ದಾಣದ ಬಳಿ 1 ರಿಂದ 4 ನೇ ಆರೋಪಿಗಳು ಇದ್ದಿರುವುದು ಕಂಡು ಬಂದಿದ್ದು, ಅವರನ್ನು ಹಿಡಿದುಕೊಂಡು ತಂದು ಠಾಣೆಗೆ ಚಾಸಾ16 ರವರ ಮುಂದೆ ಹಾಜರುಪಡಿಸಿರುತ್ತೇವೆ. ನಂತರ ಚಾಸಾ16 ರವರು ಸದರಿ 1 ರಿಂದ 4 ನೇ ಆರೋಪಿಗಳನ್ನು ವಿಚಾರಿಸಿ ಅವರ ಸ್ವಇಚ್ಛ ಹೇಳಿಕೆಯನ್ನು ದಾಖಲಿಸಿಕೊಂಡಿದ್ದು, ಅವರುಗಳು ತಮ್ಮ ಸ್ವಇಚ್ಛಾ ಹೇಳಿಕೆಯಲ್ಲಿ ಕೃತ್ಯವನ್ನು ಒಪ್ಪಿಕೊಂಡು ಕೃತ್ಯ ಸ್ಥಳವನ್ನು ಹಾಗೂ ಕೃತ್ಯಕ್ಕೆ ಉಪಯೋಗಿಸಿದ ವಸ್ತುಗಳನ್ನು ತೋರಿಸಿಕೊಡುವುದಾಗಿ ತಿಳಿಸಿದ್ದು ಆ ಮೇರೆಗೆ ಚಾಸಾ16 ರವರು 1 ರಿಂದ 4 ನೇ ಆರೋಪಿಗಳ ಬೆಂಗಾಲಾಗಿ ಚಾಸಾ8, 9, 10 ಹಾಗೂ 15 ರವರನ್ನು ಕರೆದುಕೊಂಡು 1 ರಿಂದ 4 ನೇ ಆರೋಪಿಗಳೊಂದಿಗೆ ಕೃತ್ಯ ಸ್ಥಳಕ್ಕೆ ಹೋಗಿದ್ದು, ಅಲ್ಲಿಗೆ

ಚಾಸಾ16 ರವರು ಪಂಚರಾದ ಚಾಸಾ6 ಹಾಗೂ 7 ರವರನ್ನು ಬರಮಾಡಿಕೊಂಡು ನಂತರ 1 ರಿಂದ 4ನೇ ಆರೋಪಿಗಳು ತೋರಿಸಿ ಕೊಟ್ಟ ಸ್ಥಳದಲ್ಲಿ ಮಹಜರ ಕ್ರಮ ಜರುಗಿಸಿತ್ತಾರೆ. ಸದರಿ ಮಹಜರನ್ನು ಮಧ್ಯಾಹ್ನ 1.45 ರಿಂದ 2.30 ಗಂಟೆಯವರೆಗೆ ಜರುಗಿಸಲಾಯಿತು. ಆ ಸಮಯದಲ್ಲಿ ಫೋಟೋ ಸಹ ತೆಗೆದಿರುತ್ತೇವೆ. ಸದರಿ ಮಹಜರನ್ನು ಚಾಸಾ16 ರವರ ಉಕ್ತಲೇಖನದ ಮೇರೆಗೆ ನಾನು ಬರೆದು ಸಹಿ ಮಾಡಿರುತ್ತೇನೆ. ಸಾಕ್ಷಿಗೆ ನಿಪಿ7ನ್ನು ತೋರಿಸಲಾಗಿ, ಸಾಕ್ಷಿಯು ಅದು ಚಾಸಾ*16* ರವರು *1* ರಿಂದ *4*ನೇ ಆರೋಪಿಗಳು ತೋರಿಸಿಕೊಟ್ಟ ಕೃತ್ಯ ಸ್ಥಳದಲ್ಲಿ ಮೇಲೆ ಹೇಳಿದಂತೆ ಜರುಗಿಸಿದ ಮಹಜರು ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ7ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ*7(ಸಿ)* ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ *11, 14* ಹಾಗೂ *15* ಫೋಟೋಗಳನ್ನು ತೋರಿಸಲಾಗಿ ಸಾಕ್ಷಿದು ಅದು ಮೇಲೆ ಹೇಳಿದಂತೆ ನಿಪಿ*7* ರಂತೆ ಮಹಜರ ಕ್ರಮ ಜರುಗಿಸುವಾಗ ತೆಗೆದ ಫೋಟೋಗಳು ಎಂದು ಗುರುತಿಸುತ್ತಾರೆ. ನಂತರ ನಾವು *1* ರಿಂದ *3*ನೇ ಆರೋಪಿಗಳನ್ನು ಠಾಣೆಗೆ ಕಳುಹಿಸಿರುತ್ತೇವೆ.

ನಂತರ ಪ್ರಕರಣದ *4*ನೇ ಆರೋಪಿಯಾದ ನಾಸೀರ್ ರವರು ಕೃತ್ಯಕ್ಕೆ ಬಳಸಿದ ಸ್ವತ್ತುಗಳನ್ನು ಹಾಗೂ ವಾಹನವನ್ನು ತಾನು ಬಾಡಿಗೆಗೆ ಇದ್ದ ಮಟ್ಟ ಬಾಡಗ ಬಾಣಾಂಗಾಲದಲ್ಲಿರುವ ತೆರೆಸಾ ಎಂಬುವರ ಮನೆಯಲ್ಲಿ ಇರುವುದಾಗಿ ತಿಳಿಸಿದ ಮೇರೆಗೆ ಚಾಸಾ*16* ರವರು ನನ್ನನ್ನು, ಚಾಸಾ*-10* ಹಾಗೂ *15* ರವರನ್ನು ಪಂಚರಾದ ಚಾಸಾ*-6* ಹಾಗೂ *7* ರವರನ್ನು *4*ನೇ ಆರೋಪಿಯ ಜೊತೆ ಆತ ತೋರಿಸಿಕೊಟ್ಟ ಆತನ ಬಾಡಿಗೆ ಮನೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ *4*ನೇ ಆರೋಪಿಯು ಕೃತ್ಯಕ್ಕೆ ಬಳಸಿದ ಒಂದು ಪ್ಲಾಸ್ಟಿಕ್ ಥಾಟ್, ಉದ್ದನೆಯ ಹಗ್ಗ, ಎರಡು ಮರದ ಹಿಡಿಯಿರುವ ಕಬ್ಬಿಣದ ಕತ್ತಿಗಳು, ಎರಡು ಚೂರಿಗಳು, ಒಂದು ಚಿಕ್ಕ ಚಾಕು, ಒಂದು ವೃತ್ತಕಾರದ ಮರದ ದಿಮ್ಮಿ, ಎರಡು ಚಾರ್ಜಬಲ್ ಟಾರ್ಚ್ ಗಳು, ಒಂದು ವಿದ್ಯುದ್ಮಾನ ತೂಕದ ಯಂತ್ರ, ಎರಡು ಪ್ಲಾಸ್ಟಿಕ್ ಚೀಲಗಳು ಹಾಗೂ ಕೃತ್ಯಕ್ಕೆ ಬಳಸಿಕೆ ಕೆಎ *30* ಎಂ *4035* ನೋಂದಣಿ ಸಂಖ್ಯೆಯ ಮಹೇಂದ್ರ ಪಿಕಪ್ ಮತ್ತು *5*ನೇ ಆರೋಪಿಗೆ ಸೇರಿದ ಕೆಎ *14* ವೈ *1200* ನೋಂದಣಿ ಸಂಖ್ಯೆಯ ಟಿವಿಎಸ್ ಸ್ಕೂಟರ್ ನ್ನು ತೋರಿಸಿಕೊಟ್ಟಿದ್ದು ಅದನ್ನು ಚಾಸಾ*-16* ರವರು ಚಾಸಾ*6* ಹಾಗೂ *7* ರವರ ಸಮಕ್ಷಮ ಮಹಜರ ಕ್ರಮ ಜರುಗಿಸಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಮಹಜರನ್ನು ಮಧ್ಯಾಹ್ನ *3* ರಿಂದ *4*

ಗಂಟೆಯವರೆಗೆ ಜರುಗಿಸಲಾಯಿತು. ಸದರಿ ಮಹಜರನ್ನು ಚಾಸಾ*16* ರವರ ಉಕ್ತಲೇಖನದ ಮೇರೆಗೆ ನಾನು ಬರೆದು ಅದನ್ನು ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ಫೋಟೋ ಸಹ ತೆಗೆದಿರುತ್ತೇವೆ. ಸಾಕ್ಷಿಗೆ ನಿಪಿ*9*ನ್ನು ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ಸ್ವತ್ತುಗಳನ್ನು ಅಮಾನತ್ತುಪಡಿಸಿಕೊಳ್ಳುವಾಗ ಜರುಗಿಸಿದ ಮಹಜರು ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿಪಿ*9* ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ*9(ಬಿ)* ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ***10, 12, 13*** ಹಾಗೂ ಇನ್ನೊಂದು ಫೋಟೋವನ್ನು ತೋರಿಸಲಾಗಿ ಸಾಕ್ಷಿ ಅವುಗಳು ನಿಪಿ*9* ರಂತೆ ಮಹಜರ ಕ್ರಮ ಜರುಗಿಸುವಾಗ ತೆಗೆದು ಫೋಟೋಗಳೆಂದು ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ವಿದ್ಯುನ್ಮಾನ ತೂಕದ ಯಂತ್ರ ಇರುವ ಫೋಟೋವನ್ನು ನಿಪಿ*16* ಎಂದು ಗುರುತಿಸಲಾಯಿತು. ಈ ಎಲ್ಲಾ ಸಂಗತಿಗಳ ಬಗ್ಗೆ ತನಿಖಾಧಿಕಾರಿಯವರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ರಿಂದ 3ನೇ ಆರೋಪಿಗಳನ್ನು ನೋಡಿ ಗುರುತಿಸುತ್ತಾರೆ. 4 ನೇ ಆರೋಪಿ ಗೈರು ಹಾಜರಾಗಿದ್ದು, ಅವರ ಪರ ವಕೀಲರು ಹಾಜರಾತಿ ವಿನಾಯಿತಿಯ ಅರ್ಜಿಯನ್ನು ಸಲ್ಲಿಸಿದ್ದು ಸದರಿ 4ನೇ ಆರೋಪಿಯ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲವೆಂದು ಪರಿಗಣಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ರಿಂದ 13 ಮು ಮಾಲುಗಳನ್ನು ನೋಡಿ ಗುರುತಿಸುತ್ತಾರೆ.

**ಪಾಟಿ ಸವಾಲು : ಶ್ರೀ. ಎ ಎಂ ಎಲ್ ಆರೋಪಿಗಳ ಪರ ವಕೀಲರಿಂದ :**

ನನಗೆ 1 ರಿಂದ 4ನೇ ಆರೋಪಿಗಳನ್ನು ಹಿಡಿಯುವ ಪೂರ್ವದಲ್ಲಿ ಅವರ ಪರಿಚಯವಿದ್ದಿರುವುದಿಲ್ಲ. ಬಾತ್ಮಿದಾರರು ನೀಡಿದ ಮಾಹಿತ ಆಧಾರದ ಮೇಲೆ ನಾವು 1 ರಿಂದ 4ನೇ ಆರೋಪಿಗಳನ್ನು ವಶಕ್ಕೆ ಪಡೆದು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿರುತ್ತೇವೆ. ಸದರಿ ದಿನದಂದು 1 ರಿಂದ 4ನೇ ಆರೋಪಿಗಳು ಯಾವ ಬಣ್ಣದ ಬಟ್ಟೆ ಧರಿಸಿರುತ್ತಾರೆಂದು ಹೇಳಲು ನನಗೆ ಈಗ ಆಗುವುದಿಲ್ಲ. ನಿಪಿ9 ರಡಿಯಲ್ಲಿ ಅಮಾನತ್ತುಪಡಿಸಿಕೊಂಡ ಹಗ್ಗದ ಉದ್ದವನ್ನು ಅಳತೆ ಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು ಅದು ಸುಮಾರು 25 ಅಡಿ ಉದ್ದವಿರುತ್ತದೆ ಎಂದು ನುಡಿಯುತ್ತಾರೆ. ನಿಪಿ9 ರಡಿಯಲ್ಲಿ ಜರುಗಿಸಿದ ಮಹಜರನ ಚೆಕ್ ಬಂಧಿಯನ್ನು ಹೇಳಬಲ್ಲೆ, ಪೂರ್ವಕ್ಕೆ ಸೀನಪ್ಪ ಎಂಬುವರಿಗೆ ಸೇರಿದ ವಾಸದ ಮನೆ, ಪಶ್ಚಿಮಕ್ಕೆ 4ನೇ ಆರೋಪಿ ನಾಸೀರ್

ರವರ ವಾಸದ ಮನೆ, ಉತ್ತರಕ್ಕೆ ಹೇಮಚಂದ್ರ ವಕೀಲರ ಕಾಫೀ ತೋಟ ಹಾಗೂ ದಕ್ಷಿಣಕ್ಕೆ ಮಟ್ಟ ಬಾಡಗ ಬಾಣಾಂಗಾಲ ಗ್ರಾಮಕ್ಕೆ ಹೋಗುವ ರಸ್ತೆ ಇರುತ್ತದೆ. ನಾವು 1 ರಿಂದ 4 ನೇ ಆರೋಪಿಗಳನ್ನು ವಶಕ್ಕೆ ಪಡೆದ ಮೇಲೆ ಅವರುಗಳ ಅಂಗ ಶೋಧನೆ ಮಾಡಿರುವುದಿಲ್ಲ. ಸದರಿ ದಿನದಂದು ನಮ್ಮ ಮೇಲಾಧಿಕಾರಿಯಾದ ಚಾಸಾ16 ರವರು ಆರೋಪಿಗಳ ಪತ್ತೆಗೆ ನಮ್ಮನ್ನು ನೇಮಿಸಿರುವುದಿಲ್ಲ, ನಾವು 1 ರಿಂದ 4 ನೇ ಆರೋಪಿಗಳನ್ನು ವಶಕ್ಕೆ ಪಡೆದು ಅವರನ್ನು ಚಾಸಾ16 ರವರ ಮುಂದೆ ಹಾಜರುಪಡಿಸಿರುವುದಿಲ್ಲ ಹಾಗೂ ನಿಪಿ 7 ಹಾಗೂ 9 ರಂತೆ ಜರುಗಿಸಿದ್ದಾರೆಂದು ಹೇಳಲಾದ ಮಹಜರಿನ ಸಮಯದಲ್ಲಿ ಅಲ್ಲಿ ಇದ್ದಿರಲಿಲ್ಲ ಹಾಗೂ ನಿಪಿ9 ರಡಿಯಲ್ಲಿ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ, ಬದಲಾಗಿ ಸದರಿ ಮಹಜರಿಗೆ ಠಾಣೆಯಲ್ಲೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಮ್ಮ ಮೇಲಾಧಿಕಾರಿಯವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ದಾಖಲಿಸಿದ ನಂತರ ಯಾವುದೇ ಆರೋಪಿಗಳು ಸಿಕ್ಕಿರುವುದಿಲ್ಲ ಎಂಬ ಕಾರಣಕ್ಕಾಗಿ ನಮ್ಮ ಠಾಣಾಧಿಕಾರಿಯವರು ಆರೋಪಿಗಳು ಮುಸ್ಲಿಂ ಜನಾಂಗಕ್ಕೆ ಸೇರಿದವರಾದ್ದರಿಂದ ಅವರನ್ನು ಹಿಡಿದುಕೊಂಡು ಬರುವಂತೆ ತಿಳಿಸಿದ ಮೇರೆಗೆ ನಾವು 1 ರಿಂದ 4 ನೇ ಆರೋಪಿಗಳನ್ನು ಹಿಡಿದುಕೊಂಡು ಬಂದು ಠಾಣೆಗೆ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ನಾವು ಪತ್ತೆಗೆ ಹೋಗುವ ಪೂರ್ವದಲ್ಲಿ ಠಾಣಾಧಿಕಾರಿಯವರು ಆರೋಪಿಗಳಿಗೆ ಸಂಬಂಧಿಸಿದ ಯಾವುದೇ ಭಾವಚಿತ್ರವನ್ನು ನೀಡಿರುವುದಿಲ್ಲ. ಆರೋಪಿಗಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
**(ಸಂತೋಷ ಕೊಠಾರಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ವಿರಾಜಪೇಟೆ.